ಶ್ರೀ ಎಸ್.ಆರ್. ಬೊಮ್ಮಾಯಿ.—ತಜ್ಞರ ಅಭಿಪ್ರಾಯವನ್ನು ಕೇಳಿದ್ದೇವೆ. ಅದು ಬಂದನಂತರ ಸೂಕ್ತ ತಿದ್ದುಪಡಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಚುಂಕ್ಕಿ ಗುರುತಿನ ಪ್ರಶ್ನೆ ಕ್ರಮಾಂಕ ೨೯೧ ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ತಂದಿದ್ದೆ. ಆದರೆ ಆಗ ಅವರ ಸರದಿ ಬಂದಾಗ ಅವರು ಇರಲಿಲ್ಲ ಎಂದು ಕಾಣುತ್ತದೆ. ನಾನು ಆ ಫೈಲನ್ನು ವಾಪಸು ಮಾಡಿದ್ದಾಗಿದೆ. ಆದುದರಿಂದ ದಯವಮಾಡಿ ಅದನ್ನು ಮುಂದಕ್ಕೆ ಹಾಕಬೇಕಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು.

ಪಟೇಲರಿಗೆ ಅನುಕಂಪ ಭತ್ಯದ ನೀಡಿಕೆ

೭೮೧ ಶ್ರೀ ಬಿ. ಹೆಚ್. ಯಂಕಾನಾಯಕ(ಹರಪ್ಪನಹಳ್ಳಿ).—ಮಾನ್ಯ ಕಂದಾಯ, ಯೋಜನಾ ಮತ್ತು ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯ ಸರ್ಕಾರವು ಆದೇಶ ಸಂಖ್ಯೆ ಆರ್‌ಡಿ ೪೪೩ ಎಂವಿಎಸ್ (೧) ೮೨ ದಿನಾಂಕ ೨೦-೯-೧೯೮೪ ರಂತೆ ಮಾಜಿ ಪಟೇಲರಿಗೆ ನೀಡುತ್ತಿರುವ ಅನುಕಂಪ ಭತ್ಯೆಯನ್ನು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಪಟೇಲರಿಗೆ ಇದುವರೆವಿಗೂ ನೀಡದಿರಲು ಕಾರಣವೇನು ?

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—

(ಅ) ಸರ್ಕಾರಿ ಆದೇಶ ಆರ್‌ಡಿ ೪೪೩ ಎಂವಿಎಸ್ (೧) ೮೨ ದಿನಾಂಕ ೨೦-೯-೧೯೮೪ರ ರೀತ್ಯ ಕರ್ನಾಟಕ ಗ್ರಾಮಾಧಿಕಾರಿಗಳ ರದ್ದಿಯಾತಿ ಕಾಯಿದೆ ೧೯೬೧ರ ಅನ್ವಯ ಅನುವಂಶೀಯ ಹಕ್ಕುಗಳನ್ನು ಕಳೆದುಕೊಂಡ ಮಾಜಿ ಪಟೇಲರಿಗೆ ಮಾಹೆಯಾನ ೧೦೦-೨೦ ರೂಪಾಯಿಗಳ ಅನುಕಂಪ ಭತ್ಯೆಯನ್ನು ಮಂಜೂರು ಮಾಡುವಲ್ಲಿ ಕೆಲವೊಂದು ಪಟೇಲರುಗಳ ಪದನಾಮ ನಮೂದಿಸುವಾಗ ಗ್ರಾಮ ಮುನ್ಸೀಫರನ್ನು ನಮೂದಿಸಿರಲಿಲ್ಲವಾದ್ದರಿಂದ ಹರಪನಹಳ್ಳಿಯ ಗ್ರಾಮ ಮುನ್ಸೀಫರಿಗೆ ಅನುಕಂಪ ಭತ್ಯೆಯನ್ನು ಪಾವತಿ ಮಾಡಿರುವುದಿಲ್ಲ.

ಸಂಬಂಧಿಸಿದಂತೆ ಸೂಕ್ತ ಪ್ರಸ್ತಾವನೆಗಳು ಬಂದಿದ್ದು ಅವು ಪರಿಶೀಲನೆಯಲ್ಲಿವೆ.

ಅಲ್ಲಿ ಗ್ರಾಮ ಮುನ್ಸೀಫ್‌ರಂ ಇದ್ದಾರೆ. ಪಟೇಲರ ಪದನಾಮಗಳನ್ನು ನಮೂದಿಸುವಾಗ ಗ್ರಾಮ ಮುನ್ಸಿಫರನ್ನು ನಮೂದಿಸಿಲ್ಲವಾದ ಕಾರಣದಿಂದಾಗಿ ಹೀಗೆ ಆಗಿರುತ್ತದೆ. ಈ ಬಗ್ಗೆ ವರದಿ ಬಂದ ಮೇಲೆ ಸೂಕ್ತ ಕ್ರಮವನ್ನು ಕೂಡಲೇ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ. ಎಚ್. ಯಂಕಾನಾಯಕ.—ಕೂಡಲೇ ಅಂದರೆ ಅದು ಎಷ್ಟು ದಿವಸಗಳಲ್ಲಿ ವರ್ಷಗಳಲ್ಲಿಯೇ ; ಅಥವಾ ತಿಂಗಳುಗಳಲ್ಲಿಯೇ ?

ಶ್ರೀ ಎಸ್.ಆರ್. ಬೊಮ್ಮಾಯಿ—ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಗೋಕಾಕ್ ತಾಲ್ಲೂಕಿನಲ್ಲಿ ವಿಶೇಷ ಘಟಕ ಯೋಜನೆ ಅನ್ವಯ ನೀರಾವರಿ ಯೋಜನೆಗಳು

೭೦೬ ಶ್ರೀ ಎಂ. ಎಲ್. ಮುತ್ತಣ್ಣವರ್(ಗೋಕಾಕ್) .—ಮಾನ್ಯ ಸಮಾಜಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗೋಕಾಕ್ ತಾಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ವಿಶೇಷ ಘಟಕ ಯೋಜನೆ ಯನ್ವಯ ನೀರಾವರಿ ಯೋಜನೆ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗಿದೆ ಹಾಗೂ ಅವುಗಳ ಅಂದಾಜು ವೆಚ್ಚವೆಷ್ಟು ?